ಕರ್ನಾಟಕ ವಿಧಾನಸಭೆ

ಶುಕ್ರವಾರ 28ನೇ ಜನವರಿ 2005ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ

ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

1) ಪ್ರಶ್ನೋತ್ತರಗಳು:

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಪ್ರಶ್ನೆ ಸಂಖ್ಯೆ: 46 (967)

ಅಧ್ಯಕ್ಷರು : ಮಾನ್ಯ ಹಾಲಪ್ಪನವರೇ, ತಮ್ಮ ಪ್ರಶ್ನೆ ಆರ್ಥಿಕ ಇಲಾಖೆಗೆ ವರ್ಗಾವಣೆಯಾಗಿದೆ.

ಶ್ರೀ ಹೆಚ್. ಹಾಲಪ್ಪ (ಹೊಸನಗರ) : ಅದನ್ನು ಯಾವಾಗ ತೆಗೆದುಕೊಳ್ಳುತ್ತೀರಿ?

ಅಧ್ಯಕ್ಷರು : ಮಂಗಳವಾರ ತೆಗೆದುಕೊಳ್ಳುತ್ತೇನೆ.

ಪ್ರಶ್ನೆ ಸಂಖ್ಯೆ: 47(529) ಮತ್ತು 48(347)

(ಮಾನ್ಯ ಸದಸ್ಯರು ಸದನದಲ್ಲಿ ಹಾಜರಿರಲಿಲ್ಲ.)

ಪ್ರಶ್ನೆ ಸಂಖ್ಯೆ: 49(731)

ಅಧ್ಯಕ್ಷರು : ಮಾನ್ಯ ಕೃಷ್ಣಮೂರ್ತಿಯವರೇ, ಮಾನ್ಯ ಸಹಕಾರ ಸಚಿವರು ತಮ್ಮ ಪ್ರಶ್ನೆಗೆ ಉತ್ತರಿಸಲು ಕಾಲಾವಕಾಶ ಕೇಳಿದ್ದಾರೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) : ಮಾನ್ಯ ಅಧ್ಯಕ್ಷರೇ, ವಿಧಾನ ಸಭೆಯಲ್ಲಿ ನಾನು ನಾಲ್ಕನೇ ಬಾರಿಗೆ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ಸಚಿವರು ಕಾಲಾವಕಾಶ ಕೇಳಿದ್ದಾರೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ. ನಾನು ನನ್ನ ಅಭಿಪ್ರಾಯವನ್ನು ಹೇಳಿಬಿಡುತ್ತೇನೆ.

ಅಧ್ಯಕ್ಷರು : ಮಾನ್ಯ ಸಹಕಾರ ಸಚಿವರು ಇಲ್ಲೇ ಇದ್ದಾರೆ. ಅದೇನು ಹೇಳಬೇಕೋ ಹೇಳಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೇ, ನೀವೇನು ಬ್ಯಾಲೆಟ್ ಅನ್ನು ಮಾಡಬೇಕೆಂದು ಡೇಟ್ ಅನ್ನು ನಿಗದಿ ಮಾಡಿದ್ದೀರೋ, ಆ ದಿನಾಂಕಕ್ಕೆ ಮುಂಚಿತವಾಗಿಯೇ ನಾನು ಇದನ್ನು ಕೊಟ್ಟಿದ್ದೇನೆ. ಆದರೂ ಕೂಡ ಇದಕ್ಕೆ ಸರಿಯಾದ ಉತ್ತರ ಬರಲಿಲ್ಲವೆಂದರೆ ಹೇಗೆ? ಈಗಾಗಲೇ ಸದನದಲ್ಲಿ ನಾಲ್ಕು ಬಾರಿ ಶ್ರೀರಾಮ್ ಚಿಟ್ಸ್ ಬಗ್ಗೆ ಪ್ರಸ್ತಾಪವಾಗಿದೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ತನಿಖೆ ಮಾಡಿಸುತ್ತೇನೆ ಎಂದು ಇಲ್ಲಿ ಹೇಳಿದ್ದಾರೆ. ಹೆಚ್ಚು ಕಡಿಮೆ ಇದು ಬಹು ಕೋಟಿ ರೂಪಾಯಿಗಳ ಹಗರಣವೇ ಆಗಿದೆ. ಇದೆಲ್ಲದರ ಬಗ್ಗೆ ನನ್ನ ಹತ್ತಿರ ದಾಖಲೆ ಇದೆ. ಪ್ರಶ್ನೆಗೆ ಉತ್ತರ ಕೊಡುವುದು ಬೇಡ. ಹೋಗಲಿ, ಈ ದಾಖಲೆಗಳನ್ನಾದರೂ ಪರಿಶೀಲನೆ ಮಾಡಿ, ತನಿಖೆ ಮಾಡಿಸಿ, ತಪ್ಪಿತಸ್ಥರಿಗೆ ಶಿಕ್ಷೆ ಕೊಡುತ್ತೀರಾ? ಒಂದು ವೇಳೆ ಅವರೇನಾದರೂ ತಪ್ಪಿತಸ್ಥರಲ್ಲವೆಂದು ಹೇಳಿದರೆ

ನಾನು ನನ್ನ ಶಾಸಕನ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆ. ಮಾನ್ಯ ಡಿ.ಕೆ. ಶಿವಕುಮಾರ್‌ರವರು ಸಚಿವರಾಗಿದ್ದಾಗ ಇದೇ ಪ್ರಶ್ನೆ ಎರಡು ಬಾರಿ ಪ್ರಸ್ತಾಪವಾಗಿದೆ. ಮಾನ್ಯ ವಿಶ್ವನಾಥ್‌ರವರು ಸಚಿವರಾಗಿದ್ದಾಗ ಸಹ ಎರಡು ಬಾರಿ ಪ್ರಸ್ತಾಪವಾಗಿದೆ. ನಾನು ಈಗ ಸರಿಯಾದ ಸಂದರ್ಭದಲ್ಲಿ ತಮ್ಮ ಆದೇಶವನ್ನು ಪರಿಪಾಲನೆ ಮಾಡಿ ಪ್ರಶ್ನೆ ಕೇಳಿದ್ದೇನೆ. ಆದರೂ ಉತ್ತರ ಬರಲಿಲ್ಲವೆಂದರೆ ಹೇಗೆ?

ಅಧ್ಯಕ್ಷರು : ಮಾನ್ಯ ಸಚಿವರು ಏನು ಹೇಳುತ್ತಾರೋ ಕೇಳೋಣ ಇರಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಇದರಲ್ಲಿ ಅಧಿಕಾರಿಗಳು ಶಾಮೀಲಾಗಿದ್ದಾರೆ. ನನ್ನ ಹತ್ತಿರ ದಾಖಲೆ ಇದೆ, ತಾವು ತನಿಖೆ ಮಾಡಿಸುವುದಾದರೆ ಅದನ್ನೆಲ್ಲಾ ಕೊಡುತ್ತೇನೆ. ಪ್ರಶ್ನೆಯೂ ಬೇಡ, ಉತ್ತರವೂ ಬೇಡ, ಒಂದು ಗ್ರೂಪ್‌ನಲ್ಲಿ 40 ಜನ ಇದ್ದರೆ....

ಅಧ್ಯಕ್ಷರು : ದಯಮಾಡಿ ನಾನು ಹೇಳುವುದನ್ನು ಕೇಳಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೇ, ಒಂದೇ ಒಂದು ನಿಮಿಷ. ನಾನು ಜಾಸ್ತಿ ಮಾತನಾಡುವುದಿಲ್ಲ. ಶ್ರೀರಾಮ್ ಚಿಟ್ಸ್ ಫಂಡ್‌ನವರು ಐದು ಹೆಸರಿನಲ್ಲಿ ಸಂಸ್ಥೆಯನ್ನು ರಿಜಿಸ್ಟರ್ ಮಾಡಿಸಿದ್ದಾರೆ.

ಅಧ್ಯಕ್ಷರು : ಬೇರೆ ವಿಚಾರ ಇಲ್ಲಿ ಏಕೆ? ನೀವು ಪ್ರಶ್ನೆ ಕೇಳಿದ್ದೀರಿ. ಮಾನ್ಯ ಸಚಿವರು ಅದಕ್ಕೆ ಉತ್ತರಿಸಲು 15 ದಿವಸಗಳ ಕಾಲಾವಕಾಶವನ್ನು ಕೋರಿದ್ದಾರೆ. ಸಂಬಂಧಪಟ್ಟ ಸಚಿವರು ಇಲ್ಲೇ ಇದ್ದಾರೆ. ಮಾನ್ಯ ಸಚಿವರು 4ನೇ ತಾರೀಖಿನೊಳಗಾಗಿ ಅಂದರೆ ಈ ಅಧಿವೇಶನ ಮುಗಿಯುವುದ ರೊಳಗಾಗಿ ತಮ್ಮ ಪ್ರಶ್ನೆಗೆ ಉತ್ತರ ಕೊಡಬೇಕು.

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಕೃಷ್ಣಮೂರ್ತಿಯವರು ಬಹಳ ಹಿರಿಯ ಸದಸ್ಯರಾಗಿದ್ದಾರೆ. ಅವರ ಬಗ್ಗೆ ನಮಗೆ ಸಾಕಷ್ಟು ಗೌರವ ಇದೆ. ದಯವಿಟ್ಟು ಅವರು ತಪ್ಪು ತಿಳಿದುಕೊಳ್ಳಬಾರದು. ಸದನದಲ್ಲಿ ಮಾನ್ಯ ಗೌರವಾನ್ವಿತ ಸದಸ್ಯರಿಗೆ ಯಾವ ವಿಚಾರದಲ್ಲಿ ಮಾಹಿತಿ ಬೇಕಾಗಿದ್ದರೂ ಸಹಿತ ನಾವು ಅವರಿಗೆ ಅದನ್ನು ಕೊಡಬೇಕಾಗುತ್ತದೆ. ಪಾರದರ್ಶಕವಾದ ರೀತಿಯಿಂದ ಸಂಬಂಧಪಟ್ಟ ಎಲ್ಲಾ ಮಾಹಿತಿಗಳನ್ನೂ ಸಹ ಅವರಿಗೆ ಕೊಡಬೇಕಾಗಿರುವುದು ಸರ್ಕಾರದ ಜವಾಬ್ದಾರಿಯಾಗಿದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಗೇನು ಇವರು ಪ್ರಶ್ನೆ ಕೇಳಿದ್ದಾರೋ, ಈ ಪ್ರಶ್ನೆಗೆ ಇಡೀ ಶ್ರೀರಾಮ್ ಕಂಪೆನಿಯ ಇತಿಹಾಸ, ಅವರು ಯಾವಾಗ ಹುಟ್ಟಿದರು? ಕರ್ನಾಟಕದಲ್ಲಿ ಅವರ ಸುಮಾರು ಮೂರು ಸಾವಿರ ಗ್ರೂಪ್ಸ್ ಇವೆ, ಪ್ರತಿಯೊಂದು ಗ್ರೂಪ್‌ನಲ್ಲಿ 30–40 ಜನ ಮೆಂಬರ್ಸ್ ಇದ್ದಾರೆ, ಅವರ ಹೆಸರುಗಳ ಬಗ್ಗೆ ಮಾಹಿತಿಗಳನ್ನೆಲ್ಲಾ ಸಂಗ್ರಹಿಸಬೇಕಾಗಿದೆ. ಇದೆಲ್ಲಾ ಮಾಹಿತಿಯನ್ನು ಒಂದು ವಾರದಲ್ಲಿ ತರಿಸಲಿಕ್ಕೆ ಸಾಧ್ಯವಿದೆಯೇ ಎಂಬುದನ್ನು ಮಾನ್ಯ ಸದಸ್ಯರೇ ವಿಚಾರ ಮಾಡಬೇಕು. ಲೆಜಿಸ್ಲೇಚರ್‌ನಲ್ಲಿ ಇಂತಹ ವಿಚಾರಗಳನ್ನು

ಬೇರೆ ಬೇರೆ ಮಾರ್ಗಗಳಿಂದ ತರಲಿಕ್ಕೆ ಅವಕಾಶ ಇದೆ. ಅದಕ್ಕಾಗಿ half an hour discussion ಇದೆ ಅಥವಾ ಮತ್ತಿತರ ಮಾರ್ಗಗಳಿವೆ. ಇಂತಹ ಪ್ರಶ್ನೆಗಳಿಗೆ ಉತ್ತರಿಸಲು ನಾನು ಸಾವಿರಾರು ಜನರ ಹೆಸರುಗಳ ಬಗ್ಗೆ ಮಾಹಿತಿ ಸಂಗ್ರಹಿಸಬೇಕಾಗುತ್ತದೆ. ಸಾವಿರಾರು ಜನರ ಹೆಸರುಗಳನ್ನು ನಾನು ಕೇವಲ 4–5 ದಿವಸಗಳಲ್ಲಿ ಹೇಗೆ ತರಲಿಕ್ಕೆ ಸಾಧ್ಯವಿದೆ? ಹಾಗಾಗಿ ಇದಕ್ಕೆ answer ಮಾಡುವುದು practically difficult ಇದೆ. Specific ಆಗಿ ಇಂತಹ ಕೇಸ್‌ನಲ್ಲಿ ಅನ್ಯಾಯವಾಗಿದೆ ಎಂದು ಕೇಳಿದ್ದಲ್ಲಿ, ಆ ಬಗ್ಗೆ ನಾಳೆ ಅಥವಾ ನಾಡಿದ್ದೇ ಉತ್ತರಿಸಲು ಸಾಧ್ಯವಿದೆ, I agree. ಅವರಲ್ಲಿ ಮೂರು ಸಾವಿರ ಗ್ರೂಪ್ಸ್ ಇವೆ. ಆ ಮೂರು ಸಾವಿರ ಗ್ರೂಪ್‌ನಲ್ಲಿ 10–20 ಸಾವಿರ ಜನ ಮೆಂಬರ್ಸ್ ಇದ್ದಾರೆ. ಆ ಮೆಂಬರ್ ಯಾರು? ಅವರ ಇತಿಹಾಸ ಏನು? ಅವರ ಹೆಸರಿನ ಮಾಹಿತಿ ತರಬೇಕಾದರೆ naturally I want quite some time. ಹಾಗಾಗಿ ಮಾನ್ಯ ಗೌರವಾನ್ವಿತ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಅವರು Specific ಆಗಿ ಏನಾದರು ಪ್ರಶ್ನೆ ಕೇಳಿದರೆ, ಅದರ ಬಗ್ಗೆ ನಾನು specific ಆಗಿ ಇಲ್ಲೇ ಉತ್ತರ ಕೊಡುತ್ತೇನೆ ಅಥವಾ ಅವರನ್ನು ನನ್ನ ಛೇಂಬರ್ಸ್‌ಗೆ ಕರೆಸಿ ಅವರಿಗೆ ಏನೆಲ್ಲಾ ಮಾಹಿತಿ ಬೇಕೋ ಅದನ್ನು ಕೊಡುತ್ತೇನೆ. ಆದರೆ ಅವರು ಈಗ ಕೇಳಿರುವಂತಹ ಈ ಪ್ರಶ್ನೆಗೆ ಉತ್ತರ ಕೊಡಬೇಕಾದರೆ, I require a minimum of one-month time. ಅದಕ್ಕಿಂತ ಮುಂಚೆ ಇದಕ್ಕೆ ಕೊಡಲಿಕ್ಕಾಗುವುದಿಲ್ಲ. ಇದಕ್ಕೆ ಉತ್ತರ ಕೊಡುವುದು ಬಹಳ difficult ಇದೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಇದರ ಬಗ್ಗೆ ಸಂಬಂಧಪಟ್ಟ ದಾಖಲೆಗಳ ಮಾಹಿತಿ ನನ್ನ ಬಳಿ ಇದೆ. ತೆಲಗಿ ಪ್ರಕರಣದಷ್ಟೇ ದೊಡ್ಡ ಪ್ರಕರಣ ಇದು. ಇದೇನೂ ಸಣ್ಣ ಪ್ರಕರಣವಲ್ಲ.....

ಅಧ್ಯಕ್ಷರು : ಮಾನ್ಯ ಕೃಷ್ಣಮೂರ್ತಿಗಳೇ,.....

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ. ದಯವಿಟ್ಟು ನನಗೆ ಮಾತನಾಡಲು ಅವಕಾಶ ಕೊಡಿ. ಮಾನ್ಯ ಸದಸ್ಯರು ಕೇಳುವಂತಹ ಪ್ರಶ್ನೆಗಳಿಗೆ ಸರಿಯಾದ ಉತ್ತರ ಸಿಗದಿದ್ದರೆ ಪ್ರಶ್ನೋತ್ತರ ವೇಳೆ ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತದೆ.....

ಅಧ್ಯಕ್ಷರು : ದಯಮಾಡಿ ತಾವು ನಾನು ಹೇಳುವುದನ್ನು ಕೇಳಬೇಕು. ಸುಮ್ಮನೆ ಕಾಲಹರಣ ಮಾಡುವುದು ಬೇಡಿ. ನಿಮ್ಮ ಪ್ರಶ್ನೆಯನ್ನು ಮುಂದೂಡಿದ್ದೇನೆ. ಮಾನ್ಯ ಸಚಿವರು ಯಾವ ಕಾರಣಕ್ಕೋಸ್ಕರ ಉತ್ತರಿಸಲು ವಿಳಂಬವಾಗಿದೆ ಎಂದು ಹೇಳಿದ್ದಾರೆ. ಬೇರೆ ರೀತಿಯಲ್ಲಿ ಈ ವಿಚಾರವನ್ನು ಚರ್ಚಿಸಬಹುದು ಎಂದು ಹೇಳಿದ್ದಾರೆ..... ನಾನು ಹೇಳುವುದನ್ನು ಕೇಳುವುದಿಲ್ಲವಲ್ಲ

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಒಟ್ಟಿನಲ್ಲಿ ಮಾನ್ಯ ಸಚಿವರು ಎಷ್ಟು ದಿವಸಗಳಲ್ಲಿ ಉತ್ತರ ಕೊಡುತ್ತಾರೆ ಎಂಬುದನ್ನಾದರೂ ಹೇಳಲಿ.

ಅಧ್ಯಕ್ಷರು : ಎಲ್ಲಾ ದಾಖಲಾತಿಗಳೂ ನನ್ನ ಹತ್ತಿರ ಇದೆ, ಇಲಾಖೆಯ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ, ಇದು ಈ ಹಿಂದೆ ಅನೇಕ ಸಾರಿ ಪ್ರಸ್ತಾಪವಾಗಿದೆ ಮುಂತಾದ ವಿಚಾರಗಳನ್ನೆಲ್ಲಾ ತಾವಿಲ್ಲಿ ಹೇಳಿದ್ದೀರಿ. ಬೇರೆ ರೀತಿಯಲ್ಲಿ ಇದನ್ನು ಚರ್ಚೆ ಮಾಡುವುದಕ್ಕೆ ತೆಗೆದುಕೊಂಡು ಬನ್ನಿ, ನಾನು ಅದಕ್ಕೆ ಅವಕಾಶ ಕೊಡುತ್ತೇನೆ. ಇದರ ಬಗ್ಗೆ ಚರ್ಚೆಯಾಗಲಿ. ಆಗ ಸರ್ಕಾರದವರು ಏನು ಉತ್ತರ ಹೇಳುತ್ತಾರೋ ನೋಡೋಣ. ಚರ್ಚೆ ನಡೆದು ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುವಂತಾಗಲಿ. ಆದ್ದರಿಂದ ಇದನ್ನು ತಾವು ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ.

ಸಮಗ್ರ ಗೇರು ಅಭಿವೃದ್ಧಿ ಯೋಜನೆ

50(1248) ಶ್ರೀ ಯೋಗೀಶ್ ಭಟ್. ಎನ್ (ಮಂಗಳೂರು) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಎಷ್ಟು ಹೆಕ್ಟೇರ್ ಪ್ರದೇಶಗಳಲ್ಲಿ ಗೇರು ಕೃಷಿಯನ್ನು ಬೆಳೆಯಲಾಗುತ್ತಿದೆ (ಜಿಲ್ಲಾವಾರು ಮಾಹಿತಿ ನೀಡುವುದು) ಸದರಿ ಜಿಲ್ಲೆಗಳಲ್ಲಿ ಉತ್ಪನ್ನವಾಗುತ್ತಿರುವ ಗೇರು ಬೀಜಗಳ ಪ್ರಮಾಣ ಎಷ್ಟು;

ಆ) ಸಮಗ್ರ ಗೇರು ಅಭಿವೃದ್ಧಿ ಯೋಜನೆ ಅಡಿಯಲ್ಲಿ ಉತ್ತಮ ಗುಣಮಟ್ಟದ ಗೇರು ಸಸಿಗಳನ್ನು ವಿತರಿಸಲು ನೀಡಲಾದ ಅನುದಾನದ ಮೊತ್ತ ಎಷ್ಟು;

ಇ) ಆರ್ಥಿಕ ಬೆಳೆಯಾದ ಗೇರು ಕೃಷಿಗೆ ಪ್ರೋತ್ಸಾಹಿಸುವ ದಿಶೆಯಲ್ಲಿ ಸರಕಾರದ ಕಾರ್ಯಕ್ರಮಗಳೇನು;

ಈ) ಗೇರು ಹಣ್ಣನ್ನು ಉಪಯುಕ್ತವಾಗಿ ಬಳಸಲು ಪೂರಕ ಯೋಜನೆಗಳನ್ನು ಸರಕಾರವು ರೂಪಿಸಿ ಕಾರ್ಯಗತಗೊಳಿಸಿದೆಯೆ ಹಾಗೂ ಹೌದಾದಲ್ಲಿ ವಿವರಗಳೇನು;

ಉ) ಗೇರು ಕೃಷಿ ಕುರಿತಾದ ಸಂಶೋಧನಾ ಕಾರ್ಯಕ್ರಮಗಳನ್ನು ಸರಕಾರ ಜಾರಿಗೊಳಿಸಿದೆಯೆ ಹಾಗೂ ಹೌದಾದಲ್ಲಿ ವಿವರಗಳೇನು?

ಶ್ರೀ ಆರ್. ಶ್ರೀನಿವಾಸ್ (ತೋಟಗಾರಿಕೆ ಸಚಿವರು)

ಅ) ರಾಜ್ಯದಲ್ಲಿ ಗೇರು ಬೆಳೆಯನ್ನು 61,571 ಹೆಕ್ಟೇರ್ ವಿಸ್ತೀರ್ಣದಲ್ಲಿ ಬೆಳೆಯಲಾಗುತ್ತಿದೆ. ಇದರ ಉತ್ಪನ್ನವು 1.05 ಲಕ್ಷ ಟನ್ ಇರುತ್ತದೆ. ಜಿಲ್ಲಾವಾರು ಮಾಹಿತಿಯು ಈ ಕೆಳಗಿನಂತಿರುತ್ತದೆ.